<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು</u>

**<u>ಸಿಸಿ ಸಂಖ್ಯೆ: 97/2025</u>**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,
ಗ್ರಾಮಾಂತರ ಪೊಲೀಸ್ ಠಾಣೆ, ನಂಜನಗೂಡು.

ವಿರುದ್ಧ

**ಆರೋಪಿಗಳು** : ಶ್ರೀ.ಮಹೇಶ ಮತ್ತು ಇನ್ನೊಬ್ಬರು

:: **<u>ದೋಷಾರೋಪಣೆ</u>** ::

**ಶ್ರೀ ಸತೀಶ ಕೆ.ಜಿ., ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ನಂಜನಗೂಡು ಆದ ನಾನು ಆರೋಪಿಗಳಾದ-

1) ಶ್ರೀ.ಮಹೇಶ ಬಿನ್ ಮಂಚಯ್ಯ
ವಯಸ್ಸು ಸುಮಾರು 45 ವರ್ಷ,

2) ಶ್ರೀಮತಿ.ಲಕ್ಷ್ಮೀ ಕೋಂ ಮಹೇಶ
ವಯಸ್ಸು ಸುಮಾರು 34 ವರ್ಷ,

ನಂಜನಗೂಡು ತಾಲ್ಲೂಕಿನ ಹೆಬ್ಯಾ ಗ್ರಾಮದ ನಿವಾಸಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:-

ಮೊದಲನೆಯದಾಗಿ ದಿನಾಂಕ:-02.09.2024 ರಂದು ಬೆಳಿಗ್ಗೆ 07.00 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹೆಬ್ಯಾ.ಗ್ರಾಮದಲ್ಲಿ ಚಾಸಾ-1 ರಿಂದ ಚಾಸಾ-3 ರವರು ತಮ್ಮ ಮನೆಯನ್ನು ಸ್ವಚ್ಛ ಮಾಡುತ್ತಿದ್ದಾಗ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರ ಜೊತೆ ಜಗಳ ತೆಗೆದು, ಚಾಸಾ-1 ರವರನ್ನು ಉದ್ದೇಶಿಸಿ "ನೀವ್ಯಾಕೆ ಬಂದಿದ್ದೀರಾ ನಿಮ್ಮ ತಾಯಿನ ಕರೆದುಕೊಂಡು ಹೋದ ಮೇಲೆ ನೀವೇ ನೋಡಿಕೊಳ್ಳಿ, ಸೂಳೇ ಮುಂಡೇರಾ, ಬೋಳಿ ಮುಂಡೇರಾ" ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಮೂಲಕ ಭಾರತೀಯ ನ್ಯಾಯ ಸನ್ಹಿತಾ ಕಲಂ-352 ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ–1 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 2ನೇ ಆರೋಪಿಯಾದ ನೀವು ಚಾಸಾ–1 ರವರನ್ನು ತಬ್ಬಿ ಹಿಡಿದುಕೊಂಡು ಒಂದು ಎಲ್ಲೆಯಿಂದಾಚೆಗೆ ಮುಂದೆ ಹೋಗದಂತೆ ಅಕ್ರಮವಾಗಿ ಪ್ರತಿಬಂಧಿಸಿದ್ದು, ಆ ಮೂಲಕ ಭಾರತೀಯ ನ್ಯಾಯ ಸನ್ಹಿತಾ ಕಲಂ–126(2) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ–1 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 1ನೇ ಆರೋಪಿಯಾದ ನೀವು ಕೈಯಿಂದ ಚಾಸಾ –1 ರವರ ಎಡ ಕೆನ್ನೆಗೆ ಹೊಡೆದು ಕೆಳಕ್ಕೆ ಬೀಳಿಸಿ ಕಾಲಿನಿಂದ ಬಲತೊಡೆ, ನಡುವಿಗೆ, ಹೊಟ್ಟೆಯ ಭಾಗಕ್ಕೆ ಮತ್ತು ಎದೆಗೆ ಸ್ವ–ಇಚ್ಚೆಯಿಂದ ತುಳಿದು ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ನ್ಯಾಯ ಸನ್ಹಿತಾ ಕಲಂ–115(2) ಸಹವಾಚಕ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಪ್ರಶ್ನೆಃ1– ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರುವಿರಾ?

1 ಮತ್ತು 2ನೇ ಆರೋಪಿಗಳ ಉತ್ತರಃ

ಪ್ರಶ್ನೆಃ2– ಸದರಿ ಆರೋಪಣೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ಮತ್ತು 2ನೇ ಆರೋಪಿಗಳ ಉತ್ತರಃ

(ಆರೋಪಿಗಳಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿಗಳು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತ್ತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 17.03.2026

(ಸತೀಶ. ಕೆ.ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ನಂಜನಗೂಡು.